# ವಾರ್ಡ್ ನಂ: 149 ವರ್ತೂರು ವಾರ್ಡ್ ಕಮಿಟಿ ಸಭೆಯ ನಡುವಳಿಗಳು:-

ದಿನಾಂಕ: 21/11/2020 ರಂದು ವರ್ತೂರು ವಾರ್ಡ್ ಸಂಖ್ಯೆ: 149 ರ ವ್ಯಾಪ್ತಿಯಲ್ಲಿ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂ: ಬಿ12(5)/ಪಿಆರ್/35/2020-21 ದಿನಾಂಕ: 21-09-2020 ಆದೇಶದಂತೆ ವಾರ್ಡ್ ಕಛೇರಿಯಲ್ಲಿ ಮಾನ್ಯ ಶ್ರೀ.ರಾಜೇಂದ್ರ ಚೋಳನ್, ವಿಶೇಷ ಆಯುಕ್ತರು (ಆರೋಗ್ಯ ಮತ್ತು ಹಣಕಾಸು) ವಾರ್ಡ್ ನೋಡಲ್ ಅಧಿಕಾರಿ, ರವರು ಸದಸ್ಯರು ಹಾಗೂ ಕಮಿಟಿಯ ಕಾರ್ಯದರ್ಶಿ ರವರ ಸಮಕ್ಷಮದಲ್ಲಿ ಸಭೆ ನಡೆಸಲಾಯಿತು,

ಈ ಸಭೆಯಲ್ಲಿ ಈ ಕೆಳಗೆ ತಿಳಿಸಿರುವ ಅಂಶಗಳನ್ನೊಳಗೊಂಡಂತೆ ವಾರ್ಡ್‌ನಲ್ಲಿ ಕಾರ್ಯನಿರ್ವಹಿಸಲು ಸಭೆಯಲ್ಲಿ ತಿರ್ಮಾನಿಸಲಾಯಿತು,

1. ಹಿಂದಿನ ಸಭೆಯಲ್ಲಿ(ದಿನಾಂಕ: 07-11-2020) ಚರ್ಚಿಸಲಾದ ವಿಷಯಗಳು ಮತ್ತು ದೂರುಗಳ ಬಗ್ಗೆ ಕೈಗೊಂಡಿರುವ ಕ್ರಮದ ಬಗ್ಗೆ ಚರ್ಚಿಸಲಾಯಿತು.

2. ಕೋವಿಡ್-19 ಸಾಂಕ್ರಾಮಿಕ ರೋಗ ತಡೆಗಟ್ಟುವ ಸಲುವಾಗಿ, ವರ್ತೂರು ಆರೋಗ್ಯ ಕೇಂದ್ರ ಮತ್ತು ಗುಂಜೂರು ಆರೋಗ್ಯ ಕೇಂದ್ರಗಳಲ್ಲಿ ಕೋವಿಡ್ ಪರೀಕ್ಷೆಗಾಗಿ 6 ತಂಡಗಳಲ್ಲಿ ವಿಂಗಡಿಸಿ ಮತ್ತು ಪಾಸಿಟಿವ್ ಬಂದಿರುವ ಕಡೆ ಕೋವಿಡ್ ಪರೀಕ್ಷೆಯನ್ನು ವಾರ್ಡ್ ವ್ಯಾಪ್ತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಮರ್ಪಕವಾಗಿ ಮಾಡುವುದು, ಹಾಗೂ ಕೋವಿಡ್ ಪಾಸಿಟಿವ್ ಬಂದಿರುವ ಸುತ್ತ-ಮುತ್ತ ಪ್ರದೇಶಗಳಲ್ಲಿ ಸ್ಯಾನಿಟೈಸರ್ ಮತ್ತು ಔಷದಿಯನ್ನು ಸಿಂಪಡಣೆ ಕಾರ್ಯವನ್ನು ಸಮರ್ಪಕವಾಗಿ ವಾರ್ಡ್ ವ್ಯಾಪ್ತಿಯಲ್ಲಿ ನಿರ್ವಹಿಸಲಾಗುತ್ತಿರುವುದು ಕಂಡು ಬಂದಿರುತ್ತದೆ, ಕೋವಿಡ್ ಸಂಬಂದಿಸಿದಂತೆ ವಾರ್ಡ್ ವ್ಯಾಪ್ತಿಯಲ್ಲಿ ಯಾವುದೇ ದೂರು ಬಂದಿರುವುದಿಲ್ಲ, ಇದೆ ರೀತಿಯಾಗಿ ಕೆಲಸವನ್ನು ಮುಂದುವರೆಸಲು ವಾರ್ಡ್ ನೋಡಲ್ ಅಧಿಕಾರಿ, ರವರು ಸದಸ್ಯರು ಹಾಗೂ ಕಮಿಟಿಯ ಕಾರ್ಯದರ್ಶಿಗಳು ತಿರ್ಮಾನಿಸಿದರು.

ಕ್ರಮ: ಸಹಾಯಕ ಅಭಿಯಂತರು/ಕಂದಾಯ ಪರಿವೀಕ್ಷಕರು/ಕಿರಿಯ/
ಕಿರಿಯ ಆರೋಗ್ಯ ಪರಿವೀಕ್ಷಕರು

3. ವರ್ತೂರು ವಾರ್ಡ್ ನಂ:149ರಲ್ಲಿ ಹಸಿಕಸ / ಒಣಕಸ ವಿಂಗಡನೆಯ ಕುರಿತಾಗಿ ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಬ್ಲಾಕ್‌ನ ಅನುಸಾರ ನಿರ್ವಹಿಸಲು ಹಾಗೂ ಬೀದಿ ನಾಟಕಗಳ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಹಾಗೂ ಔಷದಿ ಸಂಬಂದಿತ ಮ್ಯಾನ್ಯೂಯಲ್ ಸ್ಪ್ರೇಯಿಂಗ್, ಆಟೋ ಸ್ಪ್ರೇಯಿಂಗ್ ಫಾಗಿಂಗ್ ಕೆಲಸ ಕಾರ್ಯಗಳು ಸಮರ್ಪಕವಾಗಿ ನಿರ್ವಹಿಸುತ್ತಿರುವುದು ಕಂಡು ಬಂದಿರುತ್ತದೆ. ಸದರಿ ಕೆಲಸವನ್ನು ಮುಂದುವರೆಸಿಕೊಂಡು ಹೋಗುವಂತೆ ವಾರ್ಡ್ ನೋಡಲ್ ಅಧಿಕಾರಿ, ರವರು ಸೂಚಿಸಿದರು. ಮುಂದುವರೆದು, ಡಿ.ಬಡ್ಲ್ಯೂ.ಸಿ.ಸಿ ಕೇಂದ್ರವನ್ನು ಪ್ರಾರಂಭಿಸಲು ಸುಮಾರು 2 ಎಕರೆ ಜಾಗವನ್ನು ಕಾಯ್ದಿರಿಸಲು ತಾಲ್ಲೂಕು ಆಡಳಿತಕ್ಕೆ ಮನವಿ ಮಾಡಲು ಸೂಚಿಸಲಾಯಿತು.

ಕ್ರಮ: ಕಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು

4. ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳು ದುರಸ್ತಿಯಾಗಿರವ ಬಗ್ಗೆ ಸಾರ್ವಜನಿಕರಿಂದ ಅನೇಕ ದೂರುಗಳು ಬಂದಿದು, ಇದನ್ನು ಕೂಡಲೇ ಪರಿಶೀಲಿಸಿ, ದುರಸ್ತಿಗೊಳಿಸುವುದು ಹಾಗೂ ಬೀದಿ ದೀಪಗಳ ನಿರ್ವಹಣೆ ಮಾಡುವ ಸಮಯದಲ್ಲಿ ಬೇಕಾಗುವ ಸಾಮಾಗ್ರಿಗಳನ್ನು ಒದಗಿಸಲು ಗುತ್ತಿಗೆದಾರರಿಗೆ ಸೂಚಿಸಿದರು ಹಾಗೂ ಹೊಸದಾಗಿ ಎಲ್.ಇ.ಡಿ ಬೀದಿ ದೀಪಗಳನ್ನು ಅಳವಡಿಸಲು ಗುತ್ತಿಗೆದಾರರಿಗೆ / ಎಲೆಕ್ಟ್ರಿಕಲ್ ಇಂಜಿನಿಯರ್ ರವರಿಗೆ ವಾರ್ಡ್ ನೋಡಲ್ ಅಧಿಕಾರಿ, ರವರು ಸೂಚಿಸಿದರು.

ಕ್ರಮ: ಸಹಾಯಕ ಅಭಿಯಂತರರು, ಮತ್ತು ವಿದ್ಯುತ್ ದೀಪಗಳ ಉಸ್ತುವಾರಿ ಇಂಜಿನಿಯರ್

5. ಕಂದಾಯ ವಸೂಲಿಗಾರರು ಹಾಗೂ ಕಂದಾಯ ಪರಿವೀಕ್ಷಕರುಗಳು, ಕಂದಾಯ ವಸೂಲಾತಿಯ ಬಗ್ಗೆ ಮಾಹಿತಿ ನೀಡಿದರು, ಸದರಿ ಮಾಹಿತಿಯಲ್ಲಿ ಮಾನ್ಯ ನೋಡಲ್ ಅಧಿಕಾರಿಗಳವರು ಹಳೇಯ ಕಂದಾಯ ವಸೂಲಿ ಮಾಡುವ ಬಗ್ಗೆ ಹಾಗೂ ಸುಸ್ತಿದಾರರಿಗೆ ನೋಟೀಸ್‌ನ್ನು ನೀಡಿ ಕಾನೂನಿನಂತೆ ಕ್ರಮ ಜರುಗಿಸಲು ಸೂಚಿಸಿದರು. ಹಾಗೂ ಇದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಸೂಚಿಸಿದರು. ವಾರ್ಡ್ ಕಛೇರಿಯಲ್ಲಿ ಸಾರ್ವಜನಿಕರ ಅನುಕೂಲಕ್ಕೆ ಇರಲು ಸಾರ್ವಜನಿಕರು ಕೋರಿದರು. ಹಾಗೂ ಅಪಾರ್ಟ್‌ಮೆಂಟ್‌ಗಳಲ್ಲಿ ಕ್ಯಾಪ್ ಮೂಲಕ ಖಾತೆ ಹಾಗೂ ಚುನಾವಣಾ ಐ.ಡಿ. ಕಾರ್ಡ್ (ವೋಟರ್ ಐ.ಡಿ) ಒದಗಿಸಲಾಗುವುದು ಸಾರ್ವಜನಿಕರು ಕೋರಿದರು. ಅದರಂತೆ ಸೂಕ್ತ ಕ್ರಮ ವಹಿಸಲು ನೊಡಲ್ ಅಧಿಕಾರಿ ರವರು ಸಹಾಯಕ ಕಂದಾಯ ಅದಿಕಾರಿಗಳು ವೈಟ್‌ಫೀಲ್ಡ್ ಉಪ ವಿಬಾಗ ರವರಿಗೆ ಸೂಚಿದರು.

ಕ್ರಮ: ಸಹಾಯಕ ಕಂದಾಯ ಅಧಿಕಾರಿ, ವೈಟ್‌ಫೀಲ್ಡ್ ಉಪವಿಬಾಗ

6. ವರ್ತೂರು ಗ್ರಾಮದ ಹೊಸದಾಗಿ ಸಂತೆ ನಿರ್ಮಾಣಕ್ಕಾಗಿ ಕಾಯ್ದಿರಿಸಿರುವ ಜಾಗಕ್ಕೆ ಕಾಂಪೌಂಡ್ ಗೋಡೆ ನಿರ್ಮಿಸಲು ಹಾಗೂ ಸರ್ವೆ ಮಾಡುವ ಬಗ್ಗೆ ಮತ್ತು ಒತ್ತುವರಿಯಾಗಿರುವ ಜಾಗವನ್ನು ತೆರವುಗೊಳಿಸಲು ಸಾರ್ವಜನಿಕರು ಸಭೆಯಲ್ಲಿ ಮನವಿ ಮಾಡಿದರು. ಅದರಂತೆ ಸೂಕ್ತ ಕ್ರಮ ವಹಿಸಲು ನೊಡಲ್ ಅಧಿಕಾರಿ ರವರು ಸಹಾಯಕ ಕಂದಾಯ ಅದಿಕಾರಿಗಳು ಮತ್ತು ವಾರ್ಡ್ ಅಭಿಯಂತರರರಿಗೆ ಸೂಚಿದರು.

ಕ್ರಮ: ಸಹಾಯಕ ಕಂದಾಯ ಅಧಿಕಾರಿ,/ವಾರ್ಡ್ ಅಭಿಯಂತರರು ವೈಟ್‌ಫೀಲ್ಡ್ ಉಪವಿಬಾಗ

7. ವರ್ತೂರು ವ್ಯಾಪ್ತಿಯಲ್ಲಿ ಬಿ.ಡ್ಲ್ಯೂ.ಎಸ್.ಎಸ್.ಬಿ ಇಲಾಖೆಯ ವತಿಯಿಂದ ಆಗೆದಿರುವ ರಸ್ತೆಯನ್ನು ಸರಿಯಾಗಿ ಮುಚ್ಚದೇ ಮಣ್ಣನ್ನು ರಸ್ತೆಯಲ್ಲಿ ಬಿಟ್ಟು ಸಾರ್ವಜನಿಕರಿಗೆ ತೊಂದರೇಯಾಗುತ್ತಿರುವುದಾಗಿ ಕೋರಿ ರಸ್ತೆಗಳನ್ನು ಸರಿಯಾದ ರೀತಿಯಲ್ಲಿ ಅಂದರೆ ಅನುಮೋದನೆಗೊಂಡ ಅಂದಾಜುಪಟ್ಟಿಯಂತೆ ರಿಸ್ಟೋರೇಷನ್ ಮಾಡಲು ಸಹಾಯಕ ಅಭಿಯಂತರರು, ಬಿ.ಡ್ಲ್ಯೂ.ಎಸ್.ಎಸ್.ಬಿ ರವರು ಕ್ರಮ ಕೈಗೊಳ್ಳಲು ಸೂಚಿಸಲಾಯಿತು. ಹಾಗೂ ಕಾವೇರಪ್ಪ ಬಡಾವಣೆ, ಗುಂಜೂರು ಪಾಳ್ಯ, ಪಣತ್ತೂರು, ಬಳಗೆರೆ, ಗುಂಜೂರು ಗ್ರಾಮ, ಮಧುರಾನಗರ ಸಹಾಯಕ ಇಂಜಿನಿಯರ್, ಬಿ.ಡ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಸೂಕ್ತ ಕ್ರಮ ವಹಿಸಲು ನೊಡಲ್ ಅಧಿಕಾರಿ ರವರು ಸೂಚಿಸಿದರು.

ಕ್ರಮ: ಸ.ಕಾ.ಅ ಬಿ.ಡ್ಲ್ಯೂ.ಎಸ್.ಎಸ್.ಬಿ

8. ವರ್ತೂರು ವ್ಯಾಪ್ತಿಯಲ್ಲಿ ವರ್ತೂರು ಕೆರೆಯ ಹತ್ತಿರ, ವರ್ತೂರು ಗಾಂಧೀ ಸರ್ಕಲ್, ವರ್ತೂರು ಶಾರಧಾ ವಿದ್ಯಾ ಮಂದಿರ ಹತ್ತಿರ, ಗುಂಜೂರು ಪಾಳ್ಯ, ಗುಂಜೂರು ಗ್ರಾಮದ ಕೆರೆಯಲ್ಲಿ, ಬಳಗೆರೆ ಗ್ರಾಮ ಹಾಗೂ ಪಣತ್ತೂರು ಗ್ರಾಮಗಳಲ್ಲಿ / ಬಡಾವಣೆಗಳಲ್ಲಿ ಪಾಲಿಕೆ ವತಿಯಿಂದ ಕೊರೆದಿರುವ ಕೊಳವೆ ಬಾವಿಗಳಿಗೆ ಕೂಡಲೇ ಪಂಪು ಮತ್ತು ಮೋಟರ್‌ಗಳನ್ನು ಅಳವಡಿಸಲು ಹಾಗೂ ನೀರಿನ ಭವಣೆ ಇರುವ ಕಡೆ ನೀರು ಸರಬರಾಜಿಗಾಗಿ ಕೊಳವೆ ಸಾಲು/ಪೈಪ್‌ಗಳನ್ನು ಅಳವಡಿಸಲು ವಾರ್ಡ್ ಇಂಜಿನಿಯರ್‌ಗೆ ಸೂಕ್ತ ಕ್ರಮ ವಹಿಸಲು ನೊಡಲ್ ಅಧಿಕಾರಿ ರವರು ಸೂಚಿಸಿದರು.

ಕ್ರಮ: ವಾರ್ಡ್ ಅಭಿಯಂತರರು

9. ವಾರ್ಡ್ ವ್ಯಾಪ್ತಿಯಲ್ಲಿ ಸಿಲ್ಟ್ & ಟ್ರಾಕ್ಟರ್ ಕಾಮಗಾರಿ ನಿರ್ವಹಣೆ ಕೆಲಸವು ಮಂದಗತಿಯಲ್ಲಿ ನಡೆಯುತ್ತಿರುವುದರಿಂದ, ಹೆಚ್ಚುವರಿಯಾಗಿ ತಂಡಗಳನ್ನು ರಚಿಸಿಕೊಂಡು ಕಾಮಗಾರಿಯನ್ನು ನಿರ್ವಹಿಸಲು ಸಾರ್ವಜನಿಕರು ಕೋರಿರುವುದರಿಂದ, ಸೂಕ್ತ ಕ್ರಮ ವಹಿಸಲು ವಾರ್ಡ್ ಅಭಿಯಂತರರಿಗೆ ನೊಡಲ್ ಅಧಿಕಾರಿ ರವರು ಸೂಚಿಸಿದರು.

ಕ್ರಮ: ವಾರ್ಡ್ ಅಭಿಯಂತರರು

10. ವರ್ತೂರು ವ್ಯಾಪ್ತಿಯ ಅಡ್ಡ ರಸ್ತೆಗಳಲ್ಲಿ ಕಾವೇರಿ ನೀರಿನ ಕೊಳವೆಗಳು ಹಾಗೂ ಒಳಚರಂಡಿ ವ್ಯವಸ್ತೆ ಇನ್ನು ಬಾಕಿ ಇರುವುದರಿಂದ, ಇದನ್ನು ಪೂರ್ಣಗೊಳಿಸಲು ಸೂಚಿಸಿದ್ದು, ಬಿ.ಡ್ಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಕೆಲಸ ಮುಗಿದ ನಂತರ ಪಾಲಿಕೆ ವತಿಯಿಂದ ರಸ್ತೆಗಳ ಡಾಂಬರೀಕರಣ/ಅಭಿವೃದ್ದಿ ಮಾಡಲು ಕ್ರಮ ವಹಿಸಲಾಗುವುದು ಎಂದು ಸಹಾಯಕ ಇಂಜಿನಿಯರ್‌ಗೆ ಸೂಕ್ತ ಕ್ರಮ ವಹಿಸಲು ನೊಡಲ್ ಅಧಿಕಾರಿ ರವರು ಸೂಚಿಸಿದರು.

ಕ್ರಮ: ಸ.ಕಾ.ಅ ಬಿ.ಡ್ಬ್ಲ್ಯೂ.ಎಸ್.ಎಸ್.ಬಿ

11. ವರ್ತೂರು ಗ್ರಾಮದ ರಾಜಕಾಲುವೆಗಳನ್ನು ಹೂಳು ತುಂಬಿದ್ದು, ಇದನ್ನು ತುರ್ತಾಗಿ ತೆಗೆಸಿ, ನೀರು ಸರಾಗವಾಗಿ ಹರಿಯುವಂತೆ ಸಾರ್ವಜನಿಕರು ಕೋರಿದರು ಹಾಗೂ ರಾಜಕಾಲುವೆ ಮೇಲೆ ಅನಧಿಕೃತವಾಗಿ ಕಟ್ಟಡಗಳನ್ನು ನಿರ್ಮಿಸಿದ್ದು, ಗುಂಜೂರು ಗ್ರಾಮದ 161 ಮತ್ತು 169ರಲ್ಲಿ ಇರುವ ರಾಜಕಾಲುವೆಯು ಒತ್ತುವರಿಯಾಗಿರುವ ಬಗ್ಗೆ ತುರ್ತಾಗಿ ಸರ್ವೆ ಮಾಡಿಸಿತೆರವುಗೊಳಿಸುವುದು, ರಾಜಕಾಲುವೆ ಸಮಸ್ಯೆಯನ್ನು ತುರ್ತಾಗಿ ಚರ್ಚಿಸಿ, ವಾರ್ಡ್ ಅಭಿಯಂತರರ ಜೊತೆಯಲ್ಲಿ ಸ್ಥಳ ಪರಿಶೀಲಿಸಲು ಸಹಾಯಕ ಇಂಜಿನಿಯರ್‌ಗೆ ಸೂಕ್ತ ಕ್ರಮ ವಹಿಸಲು ನೊಡಲ್ ಅಧಿಕಾರಿ ರವರು ಸೂಚಿಸಿದರು.

ಕ್ರಮ: ವಾರ್ಡ್ ಅಭಿಯಂತರರು/ ಸ.ಕಾ.ಅ ಬೃ.ನೀ.ಗಾ

12. ವರ್ತೂರು ವಾರ್ಡ್ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಜಮೀನುಗಳ ಒತ್ತುವರಿಗಳನ್ನು ತೆರವುಗೊಳಿಸಲು ಹಾಗೂ ಸರ್ಕಾರಿ ಜಮೀನುಗಳ ಸರ್ವೆ ಮಾಡಿಸಲು ಮಾನ್ಯ ತಹಶೀಲ್ದಾರ್, ಕೆ.ಆರ್.ಪುರ, ಬೆಂಗಳೂರು ಪೂರ್ವ ತಾಲ್ಲೂಕು ರವರಿಗೆ ಪತ್ರ ಬರೆದು, ಕ್ರಮ ಕೈಗೊಳ್ಳಲು ವಾರ್ಡ್ ಅಭಿಯಂತರರಿಗೆ ಹಾಗೂ ಕಂದಾಯ ಅಧಿಕಾರಿಗಳಿಗೆ ಸೂಚಿಸಲಾಯಿತು.

ಕ್ರಮ: ಸಹಾಯಕ ಕಂದಾಯ ಅಧಿಕಾರಿಗಳು / ವಾರ್ಡ್ ಅಭಿಯಂತರರು

13. ವರ್ತೂರು ವಾರ್ಡ್ ವ್ಯಾಪ್ತಿಯಲ್ಲಿ ಬರುವ ಬಿ.ಬಿ.ಎಂ.ಪಿ, ಬೆಸ್ಕಾಂ, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಆರೋಗ್ಯ ಇಲಾಖೆ, ಬಿ.ಡಿ.ಎ., ಪೋಲೀಸ್ ಇಲಾಖೆ ಅಧಿಕಾರಿಗಳ ಸಭೆಯನ್ನು ಆಯೋಜಿಸಲು ಮಾನ್ಯ ನೋಡಲ್ ಅಧಿಕಾರಿಗಳು ಸೂಚಿಸಿದರು.

ಕ್ರಮ: ವಾರ್ಡ್ ಅಭಿಯಂತರರು

ವಾರ್ಡ್ ಕಮಿಟಿ ಸದಸ್ಯರು ಹಾಗೂ ಸಾರ್ವಜನಿಕರು, ಅಧಿಕಾರಿ ನೌಕರರು ಹಾಗೂ ಪಧಾಧಿಕಾರಿಗಳು ಈ ಮೇಲ್ಕಂಡಂತೆ ತಿಳಿಸಿರುವ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಹಾಗೂ ನಿರ್ಣಯಗಳಂತೆ ವರ್ತೂರು ವಾರ್ಡ್ ನಂ: 149 ರ ವ್ಯಾಪ್ತಿಯಲ್ಲಿ ಕೆಲಸ ಕಾರ್ಯಗಳನ್ನು/ಕುಡಿಯುವ ನೀರಿನ ಕಾಮಗಾರಿಗಳನ್ನು ಅಧ್ಯತೆ ಮೇರೆಗೆ ನಿರ್ವಹಿಸಲು ಸೂಚಿಸಲಾಯಿತು.

ವರ್ತೂರು ವಾರ್ಡ ನಂ: 149 ರ ವಾರ್ಡ್ ಕಮಿಟಿಯ ಕಾರ್ಯದರ್ಶಿಯವರಾದ ಶ್ರೀ.ವೈ.ಆರ್.ರಮೇಶ್, ಸಹಾಯಕ ಅಭಿಯಂತರರು, ರವರು ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಕಾರ್ಯನಿರ್ವಹಿಸಲು ಕೋರುತ್ತಾ, ವಂದನಾರ್ಪಣೆಯನ್ನು ಸಲ್ಲಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-

**ವಾರ್ಡ್ ಕಮಿಟಿ ಕಾರ್ಯದರ್ಶಿ**
**ವಾರ್ಡ್ ನಂ: 149**

**ಪ್ರತಿಯನ್ನು**

1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಎಲ್ಲಾ ಸದಸ್ಯರುಗಳಿಗೆ ಮಾಹಿತಿಗಾಗಿ